CS (Main) Exam,2019

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / ( LITERATURE )

| ವೇಳೆ : ಮೂರು ಗಂಟೆ | ಗರಿಷ್ಠ ಅಂಕಗಳು : 250 |
|---|---|
| *Time Allowed :* ***Three Hours*** | *Maximum Marks :* ***250*** |

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are* ***EIGHT*** *questions divided in* ***TWO SECTIONS****.*

*Candidate has to attempt* ***FIVE*** *questions in all.*

*Question nos.* ***1*** *and* ***5*** *are compulsory and out of the remaining, any* ***THREE*** *are to be attempted choosing at least* ***ONE*** *question from each section.*

*The number of marks carried by a question / part is indicated against it.*

*Answers must be written in* ***KANNADA (Kannada script)****.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಶಬ್ದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು. *10×5=50*

(a) ಭಾಷೆಯ ಸ್ವರೂಪ-ಲಕ್ಷಣಗಳು *10*

(b) 'ಸಾಹಸಭೀಮ ವಿಜಯ'ದಲ್ಲಿ ದುರ್ಯೋಧನನ ಪಾತ್ರ ಚಿತ್ರಣ *10*

(c) ಹರಿಹರನ ರಗಳೆಗಳಲ್ಲಿ ಭಕ್ತಿಯ ವಿವಿಧ ಸ್ವರೂಪಗಳು *10*

(d) ದಲಿತ-ಬಂಡಾಯ ಕಾವ್ಯದಲ್ಲಿ ಪ್ರತಿಭಟನೆಯ ಸ್ವರೂಪ *10*

(e) ವಚನ ಸಾಹಿತ್ಯದಲ್ಲಿ ಸತಿ-ಪತಿ ಭಾವವು ನಿರೂಪಿತವಾದ ಬಗೆ *10*

**Q2.** (a) ಕನ್ನಡ ಭಾಷೆಯ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳ ಕುರಿತು ಬರೆಯಿರಿ. *15*

(b) ಆಧುನಿಕ ಪೂರ್ವದ ಕನ್ನಡ ಕಾವ್ಯ ಪ್ರಕಾರಗಳಾವುವು ? ಚರ್ಚಿಸಿರಿ. *15*

(c) ಹರಿಶ್ಚಂದ್ರ ಕಾವ್ಯದಲ್ಲಿ ಬರುವ 'ಗಾನರಾಣಿಯರ ಪ್ರಸಂಗ' ವನ್ನು ವಿಶ್ಲೇಷಿಸಿರಿ. *10*

(d) ದೇವನೂರು ಮಹಾದೇವರ ಕಥೆಗಳಲ್ಲಿ ಚಿತ್ರಣಗೊಂಡಿರುವ ಶೋಷಣೆಯ ಸ್ವರೂಪವನ್ನು ವಿವರಿಸಿರಿ. *10*

**Q3.** (a) ದ್ರಾವಿಡ ಭಾಷಾ ಪರಿವಾರಗಳ ಸಾಮಾನ್ಯ ಲಕ್ಷಣಗಳನ್ನು ವಿವರಿಸಿರಿ. *15*

(b) ಕನಕದಾಸರ ಕೀರ್ತನೆಗಳಲ್ಲಿ ಪ್ರತಿ ಪಾದಿತವಾದ ಸಾಮಾಜಿಕ ಪ್ರಜ್ಞೆಯನ್ನು ವಿಶ್ಲೇಷಿಸಿರಿ. *15*

(c) ಕನ್ನಡ ಪ್ರಗತಿ ಶೀಲ ಸಾಹಿತ್ಯದ ಪ್ರಮುಖ ಆಶಯಗಳನ್ನು ಚರ್ಚಿಸಿರಿ. *10*

(d) ಕನ್ನಡ ನವ್ಯ ಸಾಹಿತ್ಯದ ಸಾಧನೆಗಳನ್ನು ವಿವರಿಸಿರಿ. *10*

**Q4.** (a) ಕನ್ನಡ ಭಾಷಾ ಬೆಳವಣಿಗೆಯ ವಿವಿಧ ಹಂತಗಳನ್ನು ಪರಿಚಯಿಸಿರಿ. *15*

(b) ಯಶೋಧರ ಚರಿತೆಯಲ್ಲಿ ಚಿತ್ರಣಗೊಂಡಿರುವ ಹಿಂಸೆಯ ವಿವಿಧ ಸ್ವರೂಪವನ್ನು ವಿಶ್ಲೇಷಿಸಿರಿ. *15*

(c) ಪುರಂದರದಾಸರ ಕೀರ್ತನೆಗಳಲ್ಲಿ ಕಂಡುಬರುವ ಭಕ್ತಿಯ ಸ್ವರೂಪವನ್ನು ನಿರೂಪಿಸಿರಿ. *10*

(d) ಕನ್ನಡ ನವೋದಯ ಸಾಹಿತ್ಯವು ಬೆಳೆದು ಬಂದ ಬಗೆಯನ್ನು, ಪ್ರಭಾವ, ಪ್ರೇರಣೆ ಮತ್ತು ಸ್ವಂತಿಕೆಯ ನೆಲೆಯಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಿರಿ. *10*

## SECTION B

**Q5.** **ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು.** *10×5=50*

(a) ಕಾವ್ಯ ಸ್ವರೂಪ : ವಿವಿಧ ವ್ಯಾಖ್ಯಾನಗಳು *10*

(b) ಕರ್ನಾಟಕದ ಸಂಗೀತ ಪರಂಪರೆ *10*

(c) ಹೊಯ್ಸಳರ ವಾಸ್ತು ಶಿಲ್ಪದ ವೈಶಿಷ್ಟ್ಯತೆ *10*

(d) ಸಾಧಾರಣೀಕರಣ *10*

(e) ಕರ್ನಾಟಕದ ಏಕೀಕರಣದ ಹೋರಾಟ *10*

**Q6.** (a) ರಸ ಸಿದ್ಧಾಂತ ಕುರಿತು ಅಲಂಕಾರಿಕರು ನಡೆಸಿದ ಚರ್ಚೆಯನ್ನು ನಿರೂಪಿಸಿರಿ. *15*

(b) ಪ್ರಾಚೀನ ಕನ್ನಡ ಸಾಹಿತ್ಯ ಹಾಗೂ ಪ್ರಭುತ್ವ – ಇವುಗಳ ನಡುವಣ ಸಂಬಂಧಾಂತರಗಳನ್ನು ಸೋದಾಹರಣವಾಗಿ ಚರ್ಚಿಸಿ. *15*

(c) ಕನ್ನಡ ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ರಾಷ್ಟ್ರಕೂಟರ ಕಾಲವನ್ನು ಮಹತ್ವದ್ದು ಎಂದು ಹೇಳಬಹುದೇ ? ಚರ್ಚಿಸಿ. *10*

(d) ಚಾರಿತ್ರಿಕ ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ಪರಿಚಯಿಸಿರಿ. *10*

**Q7.** (a) ಕನ್ನಡ ಸಾಹಿತ್ಯ ವಿಮರ್ಶೆಯ ಆಧುನಿಕ ಪ್ರವೃತ್ತಿಗಳನ್ನು ಚರ್ಚಿಸಿರಿ. *15*

(b) 'ರೀತಿಯೇ ಕಾವ್ಯದ ಆತ್ಮ' – ಈ ಮಾತನ್ನು ಹೇಳಿದ ಅಲಂಕಾರಿಕನ ಆಶಯವನ್ನು ವಿವರಿಸಿರಿ. *15*

(c) ಕರ್ನಾಟಕ ವಾಸ್ತು ಶಿಲ್ಪಕ್ಕೆ ಬಾದಾಮಿ ಚಾಲುಕ್ಯರ ಕೊಡುಗೆಯನ್ನು ಚರ್ಚಿಸಿರಿ. *10*

(d) ಕನ್ನಡ ಸಂಸ್ಕೃತಿಗೆ ವಚನ ಚಳುವಳಿಯು ಕೊಟ್ಟ ಮಹತ್ವದ ಕೊಡುಗೆ ಏನು ? ಸೋದಾಹರಣವಾಗಿ ಚರ್ಚಿಸಿ. *10*

**Q8.** (a) ಸ್ತ್ರೀವಾದಿ ವಿಮರ್ಶೆಯ ಮುಖ್ಯ ಲಕ್ಷಣಗಳನ್ನು ಸೋದಾಹರಣವಾಗಿ ಚರ್ಚಿಸಿ. *15*

(b) ಕಾವ್ಯದಲ್ಲಿ ಅಲಂಕಾರಗಳ ಮಹತ್ವವನ್ನು ಚರ್ಚಿಸಿರಿ. *15*

(c) ಕರ್ನಾಟಕದಲ್ಲಿ ಧರ್ಮ ಸಮನ್ವಯ ಬೆಳೆದು ಬಂದ ಬಗೆಯನ್ನು ವಿವರಿಸಿರಿ. *10*

(d) ವಿಜಯನಗರ ವಾಸ್ತು ಶಿಲ್ಪದ ವೈಶಿಷ್ಟ್ಯಗಳೇನು ? ಚರ್ಚಿಸಿರಿ. *10*